# <u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಅಇ (ವಿ) 158 ಪಿಇಎನ್ 2007 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:31.12.2011.

## <u>ಅಧಿಕೃತ ಜ್ಞಾಪನ</u>

ಸರ್ಕಾರದ ಆದೇಶ ಸಂಖ್ಯೆ:ಅಇ (ವಿ) 27 ಪಿಇಎನ್ 07 ದಿನಾಂಕ: 13.10.2010 ರಲ್ಲಿ ದಿನಾಂಕ: 01.07.1993ಕ್ಕಿಂತ ಮುಂಚಿತವಾಗಿ ನಿವೃತ್ತರಾದವರ ಅಥವಾ ಸೇವೆಯಲ್ಲಿರುವಾಗಲೇ ಮೃತರಾದ ಸರ್ಕಾರಿ ನೌಕರರ ಪ್ರಕರಣಗಳಲ್ಲಿ 80 ರಿಂದ 85, 85 ರಿಂದ 90 ಮತ್ತು 90 ವಯಸ್ಸು ಮೀರಿದವರಿಗೆ, ದಿನಾಂಕ: 01.04.2006 ರಿಂದ ಜಾರಿಗೆ ಬರುವಂತೆ, ಕ್ರಮವಾಗಿ ಅವರ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 20, ಶೇಕಡ 30 ಮತ್ತು 50 ರಷ್ಟು ಪಿಂಚಣಿಯನ್ನು ಪಿಂಚಣಿದಾರ/ಕುಟುಂಬ ಪಿಂಚಣಿದಾರರಿಗೆ ಹೆಚ್ಚಿಸಲು ಸರ್ಕಾರವು ಆದೇಶಿಸಿರುತ್ತದೆ.

ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ:ಅಇ (ವಿ) 27 ಪಿಇಎನ್ 2007 ದಿನಾಂಕ: 6.1.2011 ರಲ್ಲಿ ಪಿಂಚಣಿದಾರ/ಕುಟುಂಬ ಪಿಂಚಣಿದಾರನ ಜನ್ಮ ದಿನಾಂಕವು ಪಿಂಚಣಿ ಪಾವತಿ ಆದೇಶ (ಪಿ.ಪಿ.ಓ.)ದಲ್ಲಿ ಲಭ್ಯವಿಲ್ಲದಿದ್ದಲ್ಲಿ, ಪಿಂಚಣಿ ಪಾವತಿ ಪ್ರಾಧೀಕಾರವು, ಈ ಬಗ್ಗೆ ಸಂಬಂಧಪಟ್ಟ ಪಿಂಚಣಿದಾರ/ಕುಟುಂಬ ಪಿಂಚಣಿದಾರರಿಗೆ ತಿಳಿಸಿ, ಅವರಿಂದ ಈ ಕೆಳಕಂಡ ಯಾವುದಾದರು ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿ/ಎಂ.ಎಲ್.ಎ.ರವರಿಂದ ದೃಢೀಕರಿಸಿಕೊಂಡು ಪಡೆಯತಕ್ಕದ್ದೆಂದು ಆದೇಶಿಸಲಾಗಿದೆ.

1. ಎಸ್.ಎಸ್.ಎಲ್.ಸಿ. ಸರ್ಟಿಫಿಕೇಟ್ (ಹುಟ್ಟಿದ ದಿನಾಂಕ ಒಳಗೊಂಡಂತೆ)
2. ಪ್ಯಾನ್ ಕಾರ್ಡ್
3. ಪಾಸ್ಪೋರ್ಟ್
4. ಡ್ರೈವಿಂಗ್ ಲೈಸೆನ್ಸ್ (ಹುಟ್ಟಿದ ದಿನಾಂಕ ಒಳಗೊಂಡಿದ್ದರೆ)
5. ಎಲೆಕ್ಷನ್ ಐ.ಡಿ.ಕಾರ್ಡ್

ಮಹಾಲೇಖಪಾಲರು ತಮ್ಮ ದಿನಾಂಕ 5.5.2011ರ ಪತ್ರದಲ್ಲಿ, ಮೇಲೆ ತಿಳಿಸಿರುವ ದಾಖಲೆಗಳನ್ನು ಹೊಂದಿಲ್ಲದ ಕೆಲವೊಂದು ಕುಟುಂಬ ಪಿಂಚಣಿದಾರರು ಮೇಲ್ಕಂಡ ಆದೇಶದ ಪ್ರಕಾರ ಹೆಚ್ಚುವರಿ ಪಿಂಚಣಿಯನ್ನು ಯಾವ ರೀತಿ ಪಡೆಯಬೇಕೆಂಬ ಬಗ್ಗೆ ವಿಚಾರಿಸುತ್ತಿರುವುದರಿಂದ, ಇಂತಹ ಕುಟುಂಬ ಪಿಂಚಣಿದಾರರು ಅವರ ಜನ್ಮ ದಿನಾಂಕದ ಬಗ್ಗೆ ಇನ್ನಿತರ ದಾಖಲೆಗಳನ್ನು ಸಲ್ಲಿಸಿದಲ್ಲಿ ಅಂತಹವುಗಳನ್ನು ಪರಿಗಣಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ. ಸರ್ಕಾರವು ಇದನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಮೇಲೆ ತಿಳಿಸಿರುವ ಅಧಿಕೃತ ಜ್ಞಾಪನದಲ್ಲಿ ಸ್ಪಷ್ಟಪಡಿಸಿರುವ ದಾಖಲೆಗಳನ್ನು ಪಿಂಚಣಿದಾರರು/ ಕುಟುಂಬ ಪಿಂಚಣಿದಾರರು ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ, ಇನ್ನಿತರ ದಾಖಲೆಗಳ ಆಧಾರದ ಮೇಲೆ ಮೇಲ್ಕಂಡ ಆದೇಶದ ಪ್ರಕಾರ ಹೆಚ್ಚುವರಿ ಪಿಂಚಣಿಯನ್ನು ಮಂಜೂರು ಮಾಡಲು ಕೋರಿಕೆ ಸಲ್ಲಿಸಿದಲ್ಲಿ, ಅಂತಹ ಪ್ರಕರಣಗಳನ್ನು ಸಂಬಂಧಪಟ್ಟ ಸಚಿವಾಲಯದ ಆಡಳಿತ ಇಲಾಖೆಗೆ ಕಳುಹಿಸತಕ್ಕದ್ದು. ಇಂತಹ ಪ್ರಕರಣಗಳಲ್ಲಿ ಪಿಂಚಣಿದಾರನು/ಕುಟುಂಬ ಪಿಂಚಣಿದಾರನು ಹೆಚ್ಚುವರಿ ಪಿಂಚಣಿ ಕೋರಿ ಸಲ್ಲಿಸಿರುವ ದಾಖಲೆಯು ಸಮರ್ಥನೀಯವೆಂದು ಆಡಳಿತ ಇಲಾಖೆಗೆ ಕಂಡು ಬಂದಲ್ಲಿ ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿಯನ್ನು ಪ್ರಾಧೀಕರಿಸಬಹುದು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಸಚಿವಾಲಯದ ಆಡಳಿತ ಇಲಾಖೆಯ ತೀರ್ಮಾನವು ಅಂತಿಮವಾಗಿರುತ್ತದೆ.

ಆದರೆ ಜಾತಕ, ಖಾಸಗಿ ಏಜೆನ್ಸಿಗಳಿಂದ ಗುರುತು ಪ್ರಮಾಣ ಪತ್ರ ಅಥವಾ ಸ್ವ-ಪ್ರಮಾಣ ಪತ್ರ Self-Certification (Affidavit) ಗಳ ಆಧಾರದ ಮೇಲೆ ಹೆಚ್ಚುವರಿ ಪಿಂಚಣಿಗೆ ಸಲ್ಲಿಸುವ ಕೋರಿಕೆಗಳನ್ನು ಪರಿಗಣಿಸತಕ್ಕದ್ದಲ್ಲ.

(ಪದ್ಮಾವತಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,
3. ಇಲಾಖಾ ಮುಖ್ಯಸ್ಥರು,
4. ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
7. ಮಹಾಲೇಖಪಾಲರು (ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
8. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
9. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
10. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು.
14. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
15. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
16. ಅಧ್ಯಕ್ಷರು, ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು
17. ವಾರಪತ್ರ/ಶಾಖೆಯ ರಕ್ಷಾ ಕಡತ.

**GOVERNMENT OF KARNATAKA**

No.FD (Spl) 158 PEN 2011

Karnataka Government Secretariat,
M.S.Building,
Bangalore, Dated: 31.12.2011.

**OFFICIAL MEMORANDUM**

In Government Order No.FD (Spl) 27 PEN 2007, dated 13.10.2010 Government has enhanced the pension and family pension of the Government Servants who retired or died while in service prior to 01.07.1993 and who attained the age from 80 to 85, 85 to 90 and 90 years and above by 20%, 30% and 50% consecutively w.e.f. 1.4.2006.

In O.M.No.FD (Spl) 27 PEN 2007 dated 6.1.2011 it has been ordered that if the date of birth of the pensioner/family pensioner is not available in the Pension Payment Order the pension payment authority should intimate the pensioner/family pensioner about this and get from them any of the following documents duly attested by Gazetted Officer/MLA .

1. S.S.L.C. Certificate (containing the information regarding date of birth)
2. PAN card
3. Passport
4. Driving License (if it contains the date of birth )
5. Election I.D.Card

The Accountant General has in his letter dated 5.5.2011 has stated that some of the family pensioners who are not in possession of any of the documents specified above are enquiring about the way to get the benefit of additional quantum of family pension as per the above said G.O, and has requested Government to examine the possibilities of prescribing some more alternative documents to be submitted by the family pensioner in support of their age proof. Government has examined this aspect and has ordered as below.

"In case the pensioner/ family pensioner is unable to submit any of the documents mentioned in the above said O.M. but claims additional pension based on some other documentary evidence, such cases will be submitted to the concerned Administrative Secretariat. If the Administrative Secretariat is satisfied about the claim of the pensioner/family pensioner, it will authorise additional pension/family pension accordingly. The decision of the Administrative Secretariat in this regard will be final.

..2/-

However request for sanction of additional pension based on horoscope self certification (affidavit) or ID from private agencies shall not be considered.

(PADMAVATHI)
Special Officer Ex-officio,
Deputy Secretary to Government
Finance Department (Pension)

To:

1. The Chief Secretary/Additional Chief Secretaries to Government.
2. The Principal Secretaries/Secretaries to Government.
3. The Heads of Departments.
4. The Deputy Commissioners of Districts.
5. The Chief Executive Officers of District Panchayaths.
6. The Principal Accountant General (Civil & Commercial Audit), Karnataka, Bangalore.
7. The Accountant General (Revenue Receipts & Public Works & Forest Audit), Karnataka, Bangalore.
8. The Accountant General (Accounts & Rights), Karnataka, Bangalore.
9. The Registrar, High Court of Karnataka, Bangalore.
10. The Registrar, Karnataka Lokayukta, Bangalore.
11. The Registrar, Karnataka Administrative Tribunal, Bangalore.
12. The Secretary, Karnataka Public Service Commission, Bangalore.
13. The Secretary, Karnataka Legislative Assembly/Legislative Council, Bangalore.
14. The Treasury Officer, State Huzur Treasury/District Treasuries.
15. All Sections of the Karnataka Government Secretariat.
16. The President, Karnataka State Retired Pensioners Association, Cubbon Park, Bangalore.
17. Weekly Gazette.Section Guard File.